ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 21/02/2020

ಬ್ಯಾನ್ ವಿಧಾನಸಭೆ ಕಾರ್ಯದರ್ಶಿಯಿಂದ ಆದೇಶ

# ಶಾಸಕರ ಭವನದಲ್ಲೂ ಮಾಧ್ಯಮಗಳಿಗೆ ನಿಷೇಧ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಮಂಡಲ ಕಾರ್ಯ ಕಲಾಪಗಳಿಂದ ಈಗಾಗಲೇ ವಿದ್ಯುನ್ಮಾನ ಮಾಧ್ಯಮಗಳ
ಕ್ಯಾಮೆರಾಗಳಿಗೆ ನಿಷೇಧ ಹೇರಿರುವ ರಾಜ್ಯ ಸರ್ಕಾರ ಇದೀಗ, ಶಾಸಕರ ಭವನಕ್ಕೆ
ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಕ್ಕೆ ನಿಷೇಧ ಹೇರಿ ಆದೇಶ ಹೊರಡಿಸಿದೆ.
ಮಾಧ್ಯಮದವರಿಗೆ ಯಾವ ಸಮಯದಲ್ಲಿ ಶಾಸಕರ ಭವನಕ್ಕೆ ಪ್ರವೇಶ ನೀಡಬೇ
ಕೆಂದು ಸ್ಪಷ್ಟನೆ ಕೇಳಿ ಶಾಸಕರ ಭವನದ ಭದ್ರತಾ ವಿಭಾಗದ ಪೊಲೀಸರು ಬರೆದಿರುವ
ಪತ್ರಕ್ಕೆ ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಪೊಲೀಸರಿಗೆ ಈ ರೀತಿ ಆದೇಶ ಮಾಡಿ
ದ್ದಾರೆ. ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮದವರದಿಗಾರರು, ಕ್ಯಾಮೆರಾಮನ್
ಗಳಿಗೆ ಶಾಸಕರ ಭವನದ ಒಳ ಪ್ರವೇಶಕ್ಕೆ ಅವಕಾಶವಿಲ್ಲವೆಂದು ಆದೇಶಿಸಲಾಗಿದೆ.
ಶಾಸಕರು ತಮ್ಮ ಮತಕ್ಷೇತ್ರದಿಂದ ಆಗಮಿಸಿ ತಮ್ಮ ಕೆಲಸದ ಸಮಯದ ನಂತರ
ಶಾಸಕರ ಭವನದ ಕೊಠಡಿಗಳಲ್ಲಿ ತಂಗುತ್ತಾರೆ. ಈ ವೇಳೆಯು ಅವರ ಖಾಸಗಿ
ಸಮಯವಾಗಿರುತ್ತದೆ. ಆ ಸಮಯದಲ್ಲಿ ಮಾಧ್ಯಮದವರು ಶಾಸಕರನ್ನು ಭೇಟಿ
ಮಾಡಲು ಬಂದರೆ ಶಾಸಕರುಗಳ ಖಾಸಗಿತನಕ್ಕೆ ಅಡಚಣೆ ಉಂಟಾಗುತ್ತದೆ. ಒಂದು
ವೇಳೆ ಶಾಸಕರುಗಳೇ ಮಾಧ್ಯಮದವರಿಗೆ ಸಂದರ್ಶನ ನೀಡಬೇಕಾದಲ್ಲಿ ಶಾಸಕರ
ಭವನದ ಹೊರಗೆ ಬಂದು ವ್ಯವಸ್ಥೆ ಮಾಡಿಕೊಳ್ಳಬಹುದಾಗಿದೆ ಎಂದು ಸಭಾಧ್ಯಕ್ಷರು
ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾಧ್ಯಮದವರಿಗೆ ಶಾಸಕರು ಭವನದ ಒಳಗೆ
ಪ್ರವೇಶನೀಡಲುಅವಕಾಶವಿರುವುದಿಲ್ಲಎಂದುಕರ್ನಾಟಕವಿಧಾನಸಭೆಸಚಿವಾಲಯದ
(ಶಾಸಕರ ಭವನ) ಅಧೀನ ಕಾರ್ಯದರ್ಶಿ ಕೆ.ಎಂ.ಗಣೇಶ್ ಆದೇಶ ಮಾಡಿದ್ದಾರೆ.

9